ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No. 447/2015 CW-3 PW-3

| | | |
|---|---|---|
| ಹೆಸರು | : | ವೆಂಕನಗೌಡ ಪಾಟೀಲ |
| ತಂದೆಯ/ಗಂಡನ ಹೆಸರು | : | ರಾಮನಗೌಡ ಪಾಟೀಲ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ತಹಶೀಲ್ದಾರ |
| ವಾಸಸ್ಥಳ | : | ಕುಷ್ಟಗಿ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 04-09-2023

### ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ದಿಃ 02-09-2013 ರಿಂದ 10-03-2014 ರವರೆಗೆ ಸಿಂಧನೂರು ತಹಶೀಲ್ದಾರ ಕಛೇರಿಯಲ್ಲಿ ತಹಶೀಲ್ದಾರ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 24-02-2014 ರಂದು ಸಿಂಧನೂರಿನ ಜಮೀನು ಸರ್ವೇ ನಂ.758/1 ರ ವಿಚಾರವಾಗಿ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಸದರಿ ಜಮೀನನ್ನು ಈರಣ್ಣ ತಂದೆ ದುರ್ಗಪ್ಪ ರವರು ಈರಣ್ಣ ತಂದೆ ಬಂಡೆಪ್ಪರವರ ಕಡೆಯಿಂದ 1974 ರಲ್ಲಿ ಖರೀದಿಸಿದ್ದ, ಅದು ಚಾಸಾ-1 ರವರ ಹೆಸರಲ್ಲಿ 2002-03 ನೇ ಸಾಲಿನಲ್ಲಿ ಅದು ಚಾಸಾ-1 ರವರ ಹೆಸರಲ್ಲಿ ವರ್ಗಾವಣೆ ಆಗಿತ್ತು. ಅದು 2011-12 ರವರೆಗೆ ಇತ್ತು. 2012-13 ನೇ ಸಾಲಿನಲ್ಲಿ ಚಾಸಾ-1 ರವರ ಹೆಸರನ್ನು ಕಡಿಮೆ ಮಾಡಿ, ಮ್ಯೂಟೇಶನ ಸಂಖ್ಯೆ47 ದಿಃ 01-10-2012 ರನ್ವಯ 1 ನೇ ಆರೋಪಿಯ ಹೆಸರಿಗೆ ಯಾವುದೇ ಆದೇಶ ಇಲ್ಲದೇ ದಾಖಲಿಸಿರುತ್ತಾರೆ. ಆ ಮ್ಯೂಟೇಶನನ್ನು ಮಾಡಲು ಉಪವಿಭಾಗಾಧಿಕಾರಿಗಳ ಆದೇಶ ಇರಲಿಲ್ಲ.

ದಿಃ 05-10-2013 ರಂದು ಉಪವಿಭಾಗಾಧಿಕಾರಿಗಳು ಈ ಬಗ್ಗೆ ವಿಚಾರಣೆ ಮಾಡಲು ನಾನು ಪತ್ರ ಬರೆದೆ ಆ ಸಂದರ್ಭದಲ್ಲಿ 4 ನೇ ಆರೋಪಿ ನಮ್ಮ ಕಛೇರಿಯ ಭೂಮಿ ಶಾಖೆಯ ಗಣಕಯಂತ್ರ ನಿರ್ವಾಹಕ ಆಗಿ ಕೆಲಸ ಮಾಡುತ್ತಿದ್ದ. 4 ನೇ ಆರೋಪಿಯು ಎ.ಸಿ. ರವರ ಆದೇಶ

ಇಲ್ಲದೇ ಆದೇಶ ಇದೆ ಎಂದು ಹೇಳಿ ಎಮ್.ಆರ್.ನಂ. 47 ರ ಮೂಲಕ 1 ನೇ ಆರೋಪಿ ಹೆಸರಿಗೆ ಆ ಜಮೀನನ್ನು ದಾಖಲಿಸಿರುತ್ತಾನೆ. ನಾನು ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ಈ ಘಟನೆ ನಡೆದಿದ್ದು, ನಾನು ಕರ್ತವ್ಯಕ್ಕೆ ಹಾಜರಾದಾಗ 4 ನೇ ಆರೋಪಿಯು ಮಾನವಿ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ. ನಾನು ಎ.ಸಿ. ರವರಿಗೆ ಬರೆದ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ

(ಮಾನ್ಯ ಸಸಅ ರವರು ಸದರಿ ಮೂಲ ದಾಖಲೆ ಕಡತದಲ್ಲಿ ಇರದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು).

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.